ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ತನ್ನ ಸಾರಿಗೆಗಳನ್ನು ಕಡಿಮೆ ಮಾಡ ಬೇಕಾಯಿತು.

ಇ) ಪ್ರಯಾಣಿಕರಿಗೆ ಬಹಳ ಕಡಿಮೆ ಅನಾನುಕೂಲವಾಗುವಂತಹ ಮಾರ್ಗ ಗಳನ್ನು ಮಾತ್ರ ರದ್ದು ಪಡಿಸಲಾಗಿದೆ.

ಈ) ಡೀಸಲ್ ಪೂರೈಕೆಯಲ್ಲಿ ಸುಧಾರಣೆ ಆದ ನಂತರ ಆಗಿಂದಾಗ್ಗೆ ರದ್ದು ಪಡಿಸಿರುವ ಮಾರ್ಗಗಳನ್ನು ಪುನರಾರಂಭಿಸಲಾಗುವುದು.

ವಿಷಯ :- ಬೆಂಗಳೂರಿನಲ್ಲಿ ಮನೆ ಬಾಡಿಗೆ ನಿಯಂತ್ರಣ ಮತ್ತು ವಸತಿ ಸೌಕರ್ಯದ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ೬೬೪ (೧೧೪೦)

ಶ್ರೀ ರಾಮಲಿಂಗರೆಡ್ಡಿ (ಜಯನಗರ) :- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ಮನೆ ಬಾಡಿಗೆ ನಿಯಂತ್ರಣ ಮತ್ತು ವಸತಿ ಸೌಕರ್ಯ ಕಚೇರಿಗಳಿಂದ ಕಳೆದ ಐದು ವರ್ಷಗಳಲ್ಲಿ ಎಷ್ಟು ಜನರಿಗೆ ಮನೆಗಳನ್ನು ಹಂಚಲಾಗಿದೆ (ಪೂರ್ಣ ವಿವರಗಳನ್ನು ನೀಡುವುದು)

ಆ) ಆ ಪೈಕಿ ಯಾವುದೇ ತಕರಾರು ಇಲ್ಲದಿರುವ ಮನೆಗಳ ಸಂಖ್ಯೆ ಎಷ್ಟು ?

ಇ) ಈ ಕಚೇರಿಗಳು ಸಾರ್ವಜನಿಕರಿಗೆ ನಿರೀಕ್ಷಿಸಿದ್ದ ಮಟ್ಟಿಗೆ ಪ್ರಯೋಜನ ವಾಗುತ್ತಿಲ್ಲದಿರುವುದು ಸರ್ಕಾರದವರಿಗೆ ಗೊತ್ತಿದೆಯೇ;

ಈ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಉ) ಈ ದಿಸೆಯಲ್ಲಿ ನೇಮಿಸಿದ್ದ ಪ್ರಮೀಳಾ ಸಮಿತಿಯ ವರದಿಯನ್ನು ಸರ್ಕಾರದವರು ಅಂಗೀಕರಿಸಿರುವರೆ ಅಥವಾ ಇಲ್ಲವೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :-

ಅ) ೨೫೮೮ ಮನೆಗಳು

ಆ) ೫೦೧ ಮನೆಗಳು.

ಇ) ಹೌದು.

ಈ) ಈಗ ಹಾಲಿ ಜಾರಿಯಲ್ಲಿರುವ ಬಾಡಿಗೆ ನಿಯಂತ್ರಣ ಕಾಯ್ದೆಯನ್ನು ತಿದ್ದುಪಡಿ ಮಾಡುವ ಸಲುವಾಗಿ ಹಿಂದೆ ಶಾಸಕರಾಗಿದ್ದ ಶ್ರೀಮತಿ ಪ್ರಮೀಳಾರವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ನೇಮಿಸಿದ್ದು ಸದರಿ ಸಮಿತಿಯು ಸಲ್ಲಿಸಿದ ವರದಿಯ ಮೇರೆಗೆ ಒಂದು ಸಮಗ್ರ ತಿದ್ದುಪಡಿಯನ್ನು ಮಾಡಿ ವಿಧಾನ ಸಭೆಯಲ್ಲಿ

ಮಂಡಿಸಲಾಗಿತ್ತು. ಇದರ ಬಗ್ಗೆ ಚರ್ಚಿಸಿ, ಈ ಕರಡು ತಿದ್ದುಪಡಿಯನ್ನು ವಿಧಾನ ಮಂಡಲದ ಜಂಟಿ ಆಯ್ಕೆ ಸಮಿತಿಗೆ ವರದಿಗಾಗಿ ಒಪ್ಪಿಸಲಾಗಿದೆ. ವಿಧಾನ ಸಭೆಯು ವಿಸರ್ಜನೆಯಾದುದರಿಂದ ಅದರ ವರದಿ ಬಂದಿರುವದಿಲ್ಲ. ಮತ್ತೊಮ್ಮೆ ಜಂಟಿ ಆಯ್ಕೆ ಸಮಿತಿಯನ್ನು ರಚಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಉ) ಮೇಲಿನಂತೆ.

ವಿಷಯ : ಬಸ್‌ದರ ಏರಿಕೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೬೬೬ (೧೧೨೦)

ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ) :– ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಸ್ ದರ ಪುನ: ಏರಿಸುವ ವಿಷಯ ಸರ್ಕಾರ ಯೋಚಿಸುತ್ತಿದೆಯೇ ?

ಆ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರಿ ಅಜೀಜ್ ಸೇಠ್ (ಸಾರಿಗೆ ಸಚಿವರು):– ಅ) ಈ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ಆ) ಭಾರತ ಸರ್ಕಾರವು ದಿ. ೧೫–೧೦–೯೦ ರಿಂದ ಡೀಸಲ್ ತೈಲದ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಬೆಲೆಗಳನ್ನು ತೀವ್ರವಾಗಿ ಹೆಚ್ಚಿಸಿರುವುದರಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನಿರ್ವಹಣಾ ವೆಚ್ಚವು ಹೆಚ್ಚಾಗಿರುವುದೇ ಇದಕ್ಕೆ ಕಾರಣ.

ವಿಷಯ : ರಾಜ್ಯದ ಯುವಜನ ಸಂಘ ಸಂಸ್ಥೆಗಳಿಗೆ ಉತ್ಸಾಹ ನೀಡಲು ಪ್ರೋತ್ಸಾಹ ನಿಧಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೬೬೮ (೧೧೧೮)

ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ) :– ಮಾನ್ಯ ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯದ ನೊಂದಾಯಿತ ಯುವ ಜನ ಸಂಘ ಸಂಸ್ಥೆಗಳಿಗೆ ಉತ್ಸಾಹ ನೀಡಲು ಯುವ ಜನ ಸೇವಾ ಇಲಾಖೆಯಿಂದ ಸೇವಾ ಕಾರ್ಯಕ್ಕೆ ರಾಜ್ಯ ಮಟ್ಟದ ಸ್ಪರ್ಧೆ ಏರ್ಪಡಿಸಲಾಗುವುದೆ ?

ಆ) ಈ ಕಾರ್ಯಕ್ಕೆ ಬಹುಮಾನ ಇತ್ಯಾದಿಗಳಿಗೆ ಪ್ರೋತ್ಸಾಹ ನಿಧಿ ಏರ್ಪಡಿಸಲು ಸರ್ಕಾರ ಯೋಚಿಸುತ್ತಿದೆಯೇ ?

ಶ್ರೀ ಎಸ್. ರಮೇಶ್ (ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಸಚಿವರು) :–

ಅ) ಹೌದು